**PRAJAVANI**

Date: Feb 24, 2016 Page: 3D

Edition: Bangalore Language: Kannada

ಭಾರತೀಯ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷ ಡಾ.ಎನ್. ಮುತ್ತುಕುಮಾರ್ ವಿಷಾದ

# ಉತ್ಪಾದನೆಯಲ್ಲಿ ಹಿಂದುಳಿದಿರುವ ಭಾರತ

ಪ್ರಜಾವಾಣಿ ವಾರ್ತೆ

ಮೈಸೂರು: ಉತ್ಪಾದನಾ ಕ್ಷೇತ್ರದಲ್ಲಿ ಭಾರತವು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಹೋಲಿಸಿದಲ್ಲಿ ಬಹು ಹಿಂದೆ ಬಿದ್ದಿದೆ ಎಂದು ಭಾರತೀಯ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷ ಡಾ.ಎನ್. ಮುತ್ತುಕುಮಾರ್ ವಿಷಾದ ವ್ಯಕ್ತಪಡಿಸಿದರು.

ಎಸ್‌ಡಿಎಂ- ಐಎಂಡಿ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಅಂತಿಮ ವರ್ಷದ ಬಿಬಿಎಂ ಹಾಗೂ ನೂತನ ಪದವೀಧರರಿಗೆ 'ಉದ್ಯೋಗ ಮಾರ್ಗದರ್ಶಿ' ಕಾರ್ಯಕ್ರಮದಲ್ಲಿ ಅವರು 'ಉದ್ಯೋಗ ಆಕಾಂಕ್ಷಿಗಳಿಂದ ಸಂಸ್ಥೆಗಳ ನಿರೀಕ್ಷೆ' ಕುರಿತು ಮಾತನಾಡಿದರು.

ಭಾರತದ ಬಹುತೇಕ ಉದ್ದಿಮೆಗಳಲ್ಲಿ ಕುಶಲಕಲೆಗಳಿಗೆ ಆದ್ಯತೆಯನ್ನು ನೀಡಲಾಗಿಲ್ಲ. ಇದರಿಂದಾಗಿ ಉತ್ಪಾದನೆ ಸೊರಗುತ್ತಿದೆ. ಕಲಿಕೆಯ ದಿನಗಳಿಂದಲೇ ವಿದ್ಯಾರ್ಥಿಗಳಿಗೆ ಕುಶಲ ಕಲೆಗಳನ್ನು ಕಲಿಸಬೇಕು. ಇದರಿಂದ ಭಾರತದ ಉತ್ಪಾದನಾ ಮಟ್ಟವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸರಿ ಸಮಾನವಾಗಿ ನಿಲ್ಲಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.



ಮೈಸೂರಿನ ಎಸ್‌ಡಿಎಂ– ಐಎಂಡಿ ಕಾಲೇಜಿನಲ್ಲಿ ಮಂಗಳವಾರ ನಡೆದ 'ಉದ್ಯೋಗ ಮಾರ್ಗದರ್ಶಿ' ಕಾರ್ಯಕ್ರಮದಲ್ಲಿ ಡಾ.ಎನ್. ಮುತ್ತುಕುಮಾರ್, ವಿನೋದ್ ಮುತ್ತುಕೃಷ್ಣನ್, ಪ್ರೊ.ಎಸ್.ಎನ್. ಪ್ರಸಾದ್, ಎನ್.ಆರ್. ಪರಶುರಾಮನ್ ಇದ್ದಾರೆ

'ಭಾರತದಲ್ಲಿ ಪ್ರತಿ ಉದ್ಯೋಗಿಯು ಒಂದು ದಿನಕ್ಕೆ ಸರಾಸರಿ 3.5 ಗಂಟೆ ಕೆಲಸ ಮಾಡುತ್ತಾನೆ. ಆದರೆ, ಚೀನಾದಲ್ಲಿ ಇದು 5.5 ಗಂಟೆಯಿದೆ, ತೈವಾನ್‌ನಲ್ಲಿ 6.5 ಗಂಟೆ ಇದೆ.

ಅಮೆರಿಕ, ಜಪಾನ್ ನಂತಹ ರಾಷ್ಟ್ರಗಳಲ್ಲಿ ದಿನಕ್ಕೆ 7 ಗಂಟೆ ಕೆಲಸ ಮಾಡುತ್ತಾರೆ. ನಮ್ಮ ದೇಶದಲ್ಲಿ ಪ್ರಾಕೃತಿಕ ಸಂಪನ್ಮೂಲಗಳಿಗೆ ಕೊರತೆ ಇಲ್ಲವೇ ಇಲ್ಲ. ಆದರೆ, ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಳ್ಳುವ ಬಗ್ಗೆ ತುಂಬಾ ಗೊಂದಲವಿದೆ' ಎಂದು ಅವರು ಹೇಳಿದರು.

'ಇನ್ನು ಹತ್ತು ವರ್ಷಗಳಲ್ಲಿ ಉದ್ದಿಮೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡ ಬೇಕು. ಇಲ್ಲವಾದರೆ, ವಿದೇಶಿ ಕಂಪೆನಿ ಗಳ ನಡುವೆ ನಾವು ಪೈಪೋಟಿ ನೀಡ ಲಾಗದೇ, ಭಾರತ ಹಿಂದುಳಿದ ರಾಷ್ಟ್ರವಾಗಿ ಪರಿವರ್ತಿತಗೊಂಡು ಬಿಡುತ್ತದೆ' ಎಂದರು.

ನೌಕರರಿಗೆ ವೇತನ ನೀಡುವುದನ್ನು ಈಗಿನ ಕಂಪೆನಿಗಳು ದೊಡ್ಡ ತೊಂದರೆ ಎಂದು ಪರಿಗಣಿಸುತ್ತಿವೆ. 20 ವರ್ಷಗಳ ಹಿಂದೆ ಈ ರೀತಿಯ ಪರಿಸ್ಥಿತಿ ಇರಲಿಲ್ಲ. ತಮ್ಮ ಉತ್ಪಾದನೆಯ ಬಹುತೇಕ ಭಾಗವನ್ನು ಅವರು ಉದ್ಯೋಗಿಗಳಿಗೆ ವೇತನ ನೀಡಲು ವಿನಿಯೋಗಿಸುತ್ತಿದ್ದರು. ಈಗ ಬಂಡವಾಳಕ್ಕಿಂತ ಲಾಭವೇ ಹೆಚ್ಚು ಬೇಕು ಎಂಬ ಮನಸ್ಥಿತಿ ಉದ್ಯಮಿಗಳಲ್ಲಿ ಬೆಳೆದಿದೆ. ಇದರಿಂದ ಉದ್ಯೋಗಿಗಳ ಕಾರ್ಯಕ್ಷಮತೆ ಕುಸಿದಿದ್ದು, ರೋಗಗ್ರಸ್ತ ಕಂಪೆನಿಗಳು ಹುಟ್ಟಿಕೊಳ್ಳುವುದಕ್ಕೆ ಮುಖ್ಯ ಮಾರ್ಗವಾಗಿದೆ ಎಂದು ಅವರು ವಿಶ್ಲೇಷಿಸಿದರು.

'ಕ್ಲೌಡ್ ಚೆರ್ರಿ' ಸಂಸ್ಥೆಯ ಸಿಇಒ ವಿನೋದ್ ಮುತ್ತುಕೃಷ್ಣನ್ ಮುಖ್ಯ ಭಾಷಣ ಮಾಡಿ, ಹೊಸ ಹೊಸ ಜ್ಞಾನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿರಬೇಕು. ಇದರಿಂದ ತಮಗೂ, ಭವಿಷ್ಯದಲ್ಲಿ ತಾವು ಸೇರುವ ಕಂಪೆನಿಗೂ ಸಹಾಯವಾಗುವುದು ಎಂದು ಸಲಹೆ ನೀಡಿದರು.

ಎಸ್‌ಡಿಎಂ- ಐಎಂಡಿ ಕಾಲೇಜು ಆಡಳಿತ ಮುಖ್ಯಸ್ಥ ಪ್ರೊ.ಎಸ್.ಎನ್. ಪ್ರಸಾದ್, ನಿರ್ದೇಶಕ ಎನ್.ಆರ್. ಪರಶುರಾಮನ್ ಭಾಗವಹಿಸಿದ್ದರು.

**ಮುಖ್ಯಾಂಶಗಳು**

- ನೌಕರರಿಗೆ ಗೌರವಯುತ ವೇತನ ನೀಡಿದಲ್ಲಿ ಕಂಪೆನಿಗೆ ಅನುಕೂಲ
- ಮಾನವ ಸಂಪನ್ಮೂಲದ ಗರಿಷ್ಠ ಬಳಕೆಗೆ ಆದ್ಯತೆ ನೀಡಲಿ
- ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಪೈಪೋಟಿ ನೀಡಬೇಕು